

ಹಳೇಬೀಡಿನ ಕಲಾವೈಭವ

ಕೊನಿಗೆ ಇವನು ಪಾಳೇಗಾರನ ಕ್ವಾಟೆ ವಳಗೆ ಅವನ ಜೊತೇಲೇ ಉಳುದು ಒಡಮೂಡದ. ಅಲ್ಲೇ ದೇವಸ್ಥಾನವ ಕಟ್ಟಿದ್ರು. ಆದ್ರೆ ತಪ್ಪದೆ ವರ್ಷಕ್ಕೊಂದಪ ಬೆಟ್ಟ ಹತ್ತಿ ಹೋಗಿ ಬೆಣ್ಣೆ ಒಟ್ಟಲ ಒಟ್ಟೆ, ಛಳಿಗೆ ಬೆಂಕಿ ಕಾಯ್ಸಕಂಡು, ಬ್ಯಾಟೆ ಆಡಿ ಬೇಯ್ಸಕಂಡು, ತಿನ್ನಕಂಡು ಬರನಂತೆ. ಆ ಬೆಣ್ಣೆ ಒಟ್ಲೆಯ ಈಗ ಕಲ್ಲಾಗವೆ. ಅಲ್ಲಿ ಇನ್ನೂ ಅವೆ ಆ ಕಲ್ಲು. ನಾನೇ ನೋಡಿದಿನಲ್ಲ ಆ ನಮ್ಮಪ್ಪನ ಜಾತ್ರಿಗೆ ಹೋದಾಗ. ಅದಕ್ಕೆ ವರ್ಷಕ್ಕೊಂದಪ ಜಾತ್ರೆ ಮಾಡ್ಕಬತ್ತರಂತೆ ಜನ ಬೆಟ್ಟ ಹತ್ತಿ ಹೋಗಿ. ಬೆಟ್ಟ ಇಳದು ಕ್ವಾಟೆ ವಳಗಿರೋ ಶಕುನಿ ರಂಗಂಗೆ ಹಣ್ಣುತುಪ್ಪ, ಮೊಸ್ರನ್ನ ತಳಿಗೆ.

ಆಮೇಲೇನಿದ್ರೂವೆ, ಕುರಿ ಕೋಳಿ ತಂದು ಕೆರೆ ಪಕ್ಕದ, ಬೆಟ್ಟದ ಬುಡದಲಿರೊ ಬ್ಯಾಟಪ್ಪಂಗೆ ಒಪ್ಪುಸ್ತರೆ. ಬ್ಯಾಟಪ್ಪ ಅಂದ್ರೆ ಅಲ್ಲಿ ಚೂಪಾಗಿರೊ ಕೋಡುಗಳು, ಅಷ್ಟೆಯ! ಬ್ಯಾಟೆಗೋದೋನು ಜಿಂಕೆ ಕಡವೆ ಕೋಡ ಪೋಣುಸ್ಕಂಡು ಕಟ್ಕಬಂದಿದ್ನಲ್ಲ ಅವ ಅಲ್ಲಿ ಸ್ಥಾಪನೆ ಮಾಡಿದ್ದು ಅವ್ನೇಯಾ! ಅದಕ್ಕೆ ಅಲ್ಲಿ ಬ್ಯಾಟೆರಂಗ ಅವ್ನೆ ಅಂತವ ಆ ಹೆಸ್ರಲ್ಲಿ ಕರಿತರೆ. ಅದ್ರಲ್ಲೇ ಬ್ಯಾಟೆ ಆಡೊ ರುಸ್ತುಮ ಆಗಿದ್ನಂತೆ ನಮ್ಮ ಸಕುನಿ ರಂಗ.

ಇನ್ನ ಇವ್ನ ಆಲೇ ಬುಟ್ಟು ಉಳುದ ಮೂರಾಳು ಕಡೂರು ದಾಟಿ ಸಖರಾಯಪಟ್ನನೂ ದಾಟಿದ್ರು. ಚನ್ನಪ್ಪನೂ, ಅಲಘನಾಥನೂ, ತೆಂಗಿ ದುರ್ಗಮ್ಮನ್ನ ಕರಕಂದು ನಡಿತಲೇ ಹೋದ್ರು. ತಂಗಿ 'ಇನ್ನ ನಾ ನಡಿನಾರೆ ಆಕ್ಕುಲ್ಲ ಕಣ್ರಪ್ಪ ನಂಗೆ' ಅಂತವ, ಅಲ್ಲೇ ಚನ್ನರಾಯಪಟ್ಣದ ಹತ್ರಹತ್ರಕ್ಕೆ ಬಂದೋಳು ಬಯಲಲ್ಲೆ ಕೂತು ಬುಟ್ಲು. 'ನೀವು ಮುಂದುಕ್ಕೋಗಿ' ಅಂತ ಅಣ್ಣರ ಕಳುವಿದ್ಲು. ಅವಳು ಅಲ್ಲೇ ಒಡಮೂಡಿ ದುರ್ಗಮ್ಮ ಆದ್ಲಾ? ಇವತ್ತಿಗೂ ಅವಳು ಸುತ್ತ ಮುತ್ತಿನೋರ ಕುಟೆ ಕುರಿಕೋಳಿಯ ಕುಯ್ಸ್ಕತಳೆ. ಆ ಕಡೆ ಜನವೆಲ್ಲ ಅವಳಿಗೆ ಭಕ್ತರೆ ಆಗೋದ್ರಲ್ಲ ಆವತ್ತೇಯ.

ಕೊನಿಗೆ ಇವ್ರು ಇಬ್ರಾಳು ಉಳಕಂದ್ರಲ್ಲ. ನೀವು ಸೀಗೇದ ಬೆಟ್ಟಕ್ಕೋಗಿ ಅಂತ ಅಣ್ಣ ತಿಮ್ಮಪ್ಪ ಹೇಳಿ ಕಳುವಿದ್ದನಲ್ಲ! ಬೇಲೂರತಕೆ ಬಂದ್ರು. ಸಂತೆ ಸೇರಿತ್ತು. ಕಣಿ ಕಥೆ, ಹೇಳೋ ಜನ ಸೇರಿರತವ ಕುಂತ ಚನ್ನಕೇಶವಪ್ಪ ನಮ್ಮಪ್ಪ ಸಿರಿಗೊಂಡು ಜನದ ಜೊತೆ ಮಾತಿಗೆ ಕುಂತ. ಅಲ್ಲಿ ಅವ್ನಿಗೆ ಒಬ್ಳು ಸೂಳೆ ಜೊತೆಯಾಗೋದ್ಲು. ಇವನು ಮೈ ಮರತಕಂದ.

ಅಲಘನಾಥ ಇದ ಕಂಡು 'ಇವನದು ಬಗೆ ಹರಿಯಕ್ಕುಲ್ಲ! ಇವತ್ತಿಗೆ ತೆಗಿ' ಎಂದು ಅಣ್ಣನ್ನ ಅಲ್ಲೇ ಬುಟ್ಟು ಅತ್ತಗೆ ಹೆಂಡತಿ ಕರಕಂಡು ಮುಂದುಕ್ಕೋದ. ಇತ್ತಗೆ 'ಚನ್ನಕೇಶವಸ್ವಾಮಿ'ನೂ ಹಂಗೆ ಸೂಳೆ ಜೊತಿಗೆ ಚಕ್ಕಂದ ಆಡ್ಕಂಡು ಅವಳ ಮನಿಂದ ಎದ್ದುಬಂದು ಮೈ ಕೊಡವಕಂಡು ನೋಡ್ತಾನೆ. ಬೇಲೂರಿನ ಸಂತೆ ಮುಗದು ಜನೆಲ್ಲಾ ಖಾಲಿಯಾಗೋಗಿದ್ರು. ಸುಮ್ಮಾನದಲ್ಲಿ ತಲೆ ಸವರಕೊಂಡು ಆ ಸಂತೆ ಮಾಳದಲ್ಲಿ ಬೆಳದಿಂಗಳ ಚಂದ್ರ ಮೂಡದ, ನೋಡತಾ ನಿಂತಿದ್ನಂತೆ. ಅಣ್ಣ ತಿಮ್ಮಪ್ಪನ್ನ ಶಂಖದ ನಾದ ತೇಲ್ಕಂಡು ಬಂತು. ಆಗ ಇವ್ನಿಗೆ ಎಚ್ಚರಾಯ್ತು. ಅಲ್ಲೇ ಕಲ್ಲಾಗಿ ಒಡಮೂಡಕಂಡನಂತೆ. ಅವನ ಗುಡಿ ಹಿಂದಮಕ್ಕೆ ಸೂಳೆ ಮನಿಗೆ ಹೋಗೋ ದಾರಿ ಇವತ್ತಿಗೂ ಕಾಣ್ತೆತಲ್ಲ! ನಾನೂ ನೋಡಿದೀನಿ ಅಂತೀನಿ...

ಇನ್ನ ಕೊನೇನು ಅಲಘನಾಥ ಒಬ್ಬ, ಹೆಂಡ್ತಿ ಕಟ್ಕಂಡು ಕೊಂಡಜ್ಜಿ ತಂಕ ನಡಕಂಡು ಬಂದ. ಇನ್ನೇನು ಸೀಗೆಗುಡ್ಡ ಏರಬೇಕು ಆಗ, ಅಲ್ಲಿದ್ದ



